ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 78 |
| ಮಾನ್ಯ ಸದಸ್ಯರ ಹೆಸರು: | ಶ್ರೀ. ಕೆ ಅಬ್ದುಲ್ ಜಬ್ಬಾರ್ |
| ಉತ್ತರಿಸಬೇಕಾದ ದಿನಾಂಕ: | 12.09.2022 |
| ಉತ್ತರಿಸುವ ಸಚಿವರು: | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ದಾವಣಗೆರೆ ಜಿಲ್ಲಾ ಆಸ್ಪತ್ರೆಯಲ್ಲಿರುವ ವೈದ್ಯರು ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು; ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;</td><td>ದಾವಣಗೆರೆ ಜಿಲ್ಲಾ ಆಸ್ಪತ್ರೆಯಲ್ಲಿರುವ ವೈದ್ಯರು ಮತ್ತು ಇತರೆ ಸಿಬ್ಬಂದಿಗಳ ವಿವರ ಕೆಳಕಂಡಂತಿದೆ.
<table>
<tr><th>ಹುದ್ದೆ</th><th>ಮಂಜೂರು</th><th>ಕಾರ್ಯನಿರತ</th><th>ಖಾಲಿ</th><th>ಗುತ್ತಿಗೆ/ಹೊರಗುತ್ತಿಗೆ. (ಎನ್ ಹೆಚ್ ಎಂ & ಆರೋಗ್ಯ ರಕ್ಷಾ ಸಮಿತಿ)</th></tr>
<tr><td>ವೈದ್ಯರು</td><td>51</td><td>47</td><td>04</td><td>06</td></tr>
<tr><td>ಗ್ರೂಪ್ ಎ & ಬಿ</td><td>08</td><td>05</td><td>03</td><td>-</td></tr>
<tr><td>ಸಿಬ್ಬಂದಿ</td><td>545</td><td>199</td><td>346</td><td>290</td></tr>
<tr><td>ಒಟ್ಟು</td><td>604</td><td>251</td><td>353</td><td>296</td></tr>
</table>
ಹೌದು
<ul>
<li>ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ನೀಗಿಸಲು ಸರ್ಕಾರವು ಗುತ್ತಿಗೆ ಆಧಾರದ ಒಟ್ಟು 296 ಸಿಬ್ಬಂದಿಗಳನ್ನು ಆಸ್ಪತ್ರೆಗೆ ನೇಮಕ ಮಾಡಿಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ.</li>
<li>ಗುತ್ತಿಗೆ ಆಧಾರದ ಮೇಲೆ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಯಡಿಯಲ್ಲಿ ಶುಶ್ರೂಷಕ ಸಿಬ್ಬಂದಿ-17, ತಾಂತ್ರಿಕ ಸಿಬ್ಬಂದಿ-07 ಜನರನ್ನು ನೇಮಿಸಲಾಗಿದೆ ಹಾಗೂ ಎನ್.ಹೆಚ್.ಎಂ. ಅಡಿಯಲ್ಲಿ ಎಸ್.ಎನ್.ಸಿ.ಯು. ವಿಭಾಗಕ್ಕೆ ಒಟ್ಟು 03 ಜನ ಮಕ್ಕಳ ತಜ್ಞರನ್ನು 71 ಶುಶ್ರೂಷಕ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ. ಹೊರ ಗುತ್ತಿಗೆ ಆಧಾರದ ಮೇಲೆ 78 ಗ್ರೂಪ್ 'ಡಿ', ನಾನ್ ಕ್ಲಿನಿಕಲ್ 117 ಜನ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು ಒಟ್ಟಾರೆ ಸಿಬ್ಬಂದಿ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.</li>
<li>ಸೇವಾನಿರತ ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಬರುವ ತಜ್ಞ ವೈದ್ಯರನ್ನು ತಜ್ಞತೆ ಹುದ್ದೆಗೆ ನೇಮಿಸಲಾಗುತ್ತಿದೆ ಮತ್ತು ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿ ಬರುವ ತಜ್ಞ ವೈದ್ಯ ಅಭ್ಯರ್ಥಿಗಳನ್ನು 1 ವರ್ಷದ ಕಡ್ಡಾಯ ಸೇವೆಗಾಗಿ ನೇಮಕ ಮಾಡುವ ಮೂಲಕ ತಜ್ಞ ವೈದ್ಯರ ಕೊರತೆ ನೀಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.</li>
<li>ಇಲಾಖೆಯಲ್ಲಿ ಖಾಲಿ ಇರುವ 400 ಫಾರ್ಮಾಸಿಸ್ಟ್, 150 ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು ಹಾಗೂ 08 ಕ್ಷ-ಕಿರಣ ತಂತ್ರಜ್ಞರ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ:02.09.2022ರಲ್ಲಿ ಅಧಿಸೂಚನೆ ಹೊರಡಿಸಿ, ದಿನಾಂಕ:07.09.2022ರಿಂದ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.</li>
</ul></td></tr>
</table>

| | | |
|---|---|---|
| ಆ. | ದಾವಣಗೆರೆ ಜಿಲ್ಲಾ ಆಸ್ಪತ್ರೆಯಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮೂಲಭೂತ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | **ಹೌದು**<br>ದಾವಣಗೆರೆ ಜಿಲ್ಲಾ ಆಸ್ಪತ್ರೆಯ ಮುಖ್ಯ ಕಟ್ಟಡದಲ್ಲಿ ಒಟ್ಟು 6 ವಿಭಾಗಗಳನ್ನೊಳಗೊಂಡಂತೆ, ನೆಲ ಮಹಡಿ, ಮೊದಲನೇ ಮಹಡಿ ಹಾಗೂ ಎರಡನೇ ಮಹಡಿಗಳ ಕಟ್ಟಡ ಇರುತ್ತದೆ.<br>ಸದರಿ ಜಿಲ್ಲಾ ಆಸ್ಪತ್ರೆಯ ಮುಖ್ಯ ಕಟ್ಟಡದ ನಿರ್ವಹಣೆ / ಉನ್ನತೀಕರಣ ಕಾಮಗಾರಿಗೆ 2016-17ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:4210-01-110-1-01-386 (Other Major Works) ಅಡಿಯಲ್ಲಿ ಒಟ್ಟು ರೂ.700.00 ಲಕ್ಷಗಳು ಮಂಜೂರಾಗಿದ್ದು, ಈ ಅನುದಾನದಲ್ಲಿ ಮುಖ್ಯ ಕಟ್ಟಡದ 6 ವಿಭಾಗಗಳ ದುರಸ್ಥಿ/ಉನ್ನತೀಕರಣ ಕಾಮಗಾರಿಗಳನ್ನು ದಿನಾಂಕ:21.01.2017 ರಂದು ಪ್ರಾರಂಭಿಸಿ ದಿ:31.07.2019 ರಂದು ಪೂರ್ಣಗೊಳಿಸಲಾಗಿರುತ್ತದೆ.<br>ಮುಂದುವರೆದು, ಸದರಿ ಕಟ್ಟಡದ ಉಳಿದ 4 ವಿಭಾಗಗಳ ದುರಸ್ಥಿ / ಉನ್ನತೀಕರಣ ಕಾಮಗಾರಿಗಳನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು. |
| ಇ. | ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ತಾಲ್ಲೂಕು ಆಸ್ಪತ್ರೆಗಳೆಷ್ಟು? (ಸಂಪೂರ್ಣ ಮಾಹಿತಿ ಒದಗಿಸುವುದು) | ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ತಾಲ್ಲೂಕು ಆಸ್ಪತ್ರೆಗಳ ಸಂಖ್ಯೆ:04 ವಿವರ ಈ ಕೆಳಕಂಡಂತಿದೆ.<br>1. ತಾಲ್ಲೂಕು ಆಸ್ಪತ್ರೆ, ಹರಿಹರ.<br>2. ತಾಲ್ಲೂಕು ಆಸ್ಪತ್ರೆ, ಜಗಳೂರು.<br>3. ತಾಲ್ಲೂಕು ಆಸ್ಪತ್ರೆ, ಹೊನ್ನಾಳ್ಳಿ.<br>4. ತಾಲ್ಲೂಕು ಆಸ್ಪತ್ರೆ, ಚನ್ನಗಿರಿ. |

**ಸಂಖ್ಯೆ: ಆಕುಕ 50 ಹೆಚ್‌ಎಸ್‌ಡಿ 2022**

(ಡಾ. ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.